ತಂದಿ ತಾಯಿ' ಅಂತ ಹೇಳಿದ. ಕರ್ನಾಟಕ-ಮಹಾರಾಷ್ಟ್ರ ಗಡಿ ಮುಚ್ಚಿರುವ ಬಗ್ಗೆ ಅವನೇ ಈ ಮೊದಲು ಮನಿಗೆ ತಿಳಿಸಿದ್ದನಂತೆ.

ನಾಕು ದಿನಗಳ ನಂತರ ಅವನ ಆರೋಗ್ಯ ತೀರ ಹದಗೆಟ್ಟಿತು. ವೆಂಟಿಲೇಟರ್ ಅಳವಡಿಸಿದ್ದರೂ ಉಸಿರಾಟ ಕಷ್ಟವಾಗತೊಡಗಿತು. ಅಲ್ಲಿ ನಾನು ಮೆಡಿಕಲ್ ರಿಪ್ರಜೆಂಟೇಟಿವ್ ಆಗಿ ಪರಿಚಿತ ಆಗಿರುವುದರಿಂದ ಮುಖಗವುಸು, ಗೌನು ಹಾಕ್ಕೊಂಡು ನೋಡಲು ಸಾಧ್ಯ ಆಯಿತು. ಅವನ ಪರಿಸ್ಥಿತಿ ಚಿಂತಾಜನಕವಾಗಿತ್ತು.

ಅವ ಆರ್ತನಾಗಿ ನನ್ನ ಕಡೀಗೆ ನೋಡಿದಾಗ ನನಗ ಹಿಂಸೆ ಆಯ್ತು. ಇನ್ನು ತಾನುಳಿಯೋದಿಲ್ಲಂತ ಅವನಿಗೆ ಅನಿಸಿರಬೇಕು. ದಷ್ಟಪುಷ್ಟವಾಗಿದ್ದ ಗೆಳೆಯ ಒಮ್ಮೆಲೇ ಜರ್‍ರನೇ ಜರಿದುಬಿಟ್ಟದ್ದು ಕಂಡು ನನ್ನ ಕಣ್ಣು ಹನಿಗೂಡಿತು. ಡಾಕ್ಟರು ಉಳಿಸಿಕೊಳ್ಳಲು ಸಾಕಷ್ಟು ಹೋರಾಟ ಮಾಡಿದರು. ಕೊನೀಗೆ ಕೈಚೆಲ್ಲಿದರು. ಆಸ್ಪತ್ರೆಯ ಸಿಬ್ಬಂದಿಯೇ ಸಾಮೂಹಿಕವಾಗಿ ಶವಗಳನ್ನ ಒಂದು ಆಳವಾದ ಕಂದಕದಲ್ಲಿ ಒಗೆದರು.'

ಇದನ್ನ ಕೇಳಿ ಗಣೇಶನ ಎದಿ ಝಲ್ ಅಂತು. ಯಾವ ಆಡಂಬರ ಇರದೇ ಮೌನವಾಗಿ ಜೀವಪರ ಕೆಲಸ ಮಾಡತಿದ್ದ ಜಗದೀಶ ಇನ್ನಿಲ್ಲ. ಹಣೆಗೆ ಕೈ ಹಚ್ಚಿ ತುಸು ಹೊತ್ತು ಸುಮ್ಮನೆ ಕೂತ. ಅವನ ತಂದಿತಾಯಿಗೆ ಹೆಂಗ ಹೇಳೋದು? ಮೊದಲಿಗೆ ಜಗದೀಶನ ಸೋದರ ಮಾವ ಪ್ರೊಫೆಸರ್ ಸಿದ್ದಪ್ಪ ಅವರಿಗೆ ಹೇಳಿದರಾಯ್ತು ಅನ್ಕೊಂಡು ಫೋನು ಹಚ್ಚಿ ವಿಷಯ ತಿಳಿಸಿದ.

ಪ್ರೊಫೆಸರ್ ಗಾಬರಿಯಿಂದ ಮೆತ್ತಗೆ ಮಾತಾಡಿದರು, 'ಎಂಥ ಅನಾಹುತ ಆಯಿತ್ರೀ! ನಮ್ಮ ಮನೆಯವರಿಗೆ ಹೇಳಿದ್ರ ರಾಮಾರಂಪು ಮಾಡತಾರ. ಆಕೆ ಅವನನ್ನ ಎತಗೊಂಡು ಆಡಿಸಿದಾಕೆ. ನಾನು ಮೊದಲು ಆಕಿಯನ್ನ ಸಂಭಾಳಿಸೋದು ಕಷ್ಟ ಐತಿ. ಅಂದಂಗ ಅವನ ತಾಯಿಗೆ ನೀವೇ ಫೋನ್ ಹಚ್ಚಿ ಅಷ್ಟಷ್ಟ ಹೇಳ್ತಾ ಹೋಗ್ರಿ.'

ಇದು ಬಹಳ ಸಂಕಟದ ಸಮಯ, ಹೇಳೋದು ಹೇಳಲೇಬೇಕಲ್ಲ ಅನಿಸಿ ಫೋನು ಹಚ್ಚಿದ ಎದಿಗುದಿಯಿಂದಲೇ.

'ನಮಸ್ಕಾರ, ಅಮ್ಮ.'

'ಯಾರು?'

'ನಾನು ಗಣೇಶ ಅಮ್ಮ.'

'ನಿನ್ನ ಗೆಳೆಯ ಜಗದೀಶ ಯಾವಾಗ ಬರತಾನಪಾ? ರಸ್ತೆ ಖುಲ್ಲಾ ಆಯ್ತೋ ಇಲ್ಲೋ? ಈಗ ಮೂರು ದಿನದ ಹಿಂದ ಜಗ್ಗುಗ ಫೋನು ಮಾಡಿದ್ರ ಅವನ ಗೆಳೆಯ ಎತ್ತಿದ. 'ಸೊಲ್ಪ ನೆಗಡಿ, ಅಷ್ಟೇ, ಮಲಕೊಂಡಾನ. ರಸ್ತಾ ಸುರು ಆದ ಕೂಡಲೇ ಬರತಾನ' ಅಂತ ಹೇಳಿದ.

'ಸೊಲ್ಪ ಜ್ವರಾನೂ ಬಂದಿದ್ದವು ಅಂತ.' ಗಣೇಶ ಸೇರಿಸಿದ.

'ಈಗ ಹೆಂಗ ಅದಾನ? ಮಾಮೂಲಿ ಜ್ವರಾನs?'

'ಹೌದು, ಮಾಮೂಲಿ ಜ್ವರಾನೇ... ಆದ್ರ ಬರಬರ್ತಾ ಕೊರಾನಾಕ್ಕ ತಿರಗಿತಂತ. ಅಲ್ಲೇ ಅವನ ಗೆಳೆಯ ಅಡ್ಮಿಟ್ ಮಾಡ್ಯಾನ.'

'ಈಗ ಹೆಂಗ ಅದಾನಪಾ?'

'ಈಗ ಸೊಲ್ಪ ಸೀರಿಯಸ್ಸಂತ.'

'ಹಾಂ!'

'ಅಮ್ಮ ನೀವು ಗಾಬರಿ ಆಗದಿದ್ರ. ಮನಸು ಗಟ್ಟಿ ಮಾಡಿಕೊಂಡ್ರ...ನಾ ಹೇಳ್ತೀನಿ.'

'ಹೇಳು, ಗಟ್ಟಿಯಾಗೇ ಅದೀನಿ... ಖರೆ, ಹೇಳು.'

'ನಿನ್ನೆ ಹೋದನಂತ...'

'ಅಯ್ಯೋ ದೇವರೆ' ಆ ಕಡೆಯಿಂದ ಜೋರಾಗಿ ಬಿಕ್ಕಿ ಬಿಕ್ಕಿ ಅಳು.

ಫೋನು ಸ್ತಬ್ಧ ಆಯಿತು.

ಸುಮಾರು ಒಂದು ತಾಸಿನ ನಂತರ ತಾಯಿಯೇ ಗಣೇಶನಿಗೆ ಫೋನು ಹಚ್ಚಿದಳು.

'ನೋಡಪಾ, ಎಂಥಾ ಕಾಲ ಬಂತು! ನಾವು ಅವನ ಮಣ್ಣಿಗೂ ಹೋಗಲಾರದಂಥ ಸ್ಥಿತಿ! ಏನು ಮಾಡೋದು! ನಮ್ಮ ಮನಿಯವರು ಹಾರ್ಟ್ ಪೇಷಂಟ್. ಅವರಿಗೆ ಇನ್ನೂ ಹೇಳಿಲ್ಲ. ನಿಧಾನಕ್ಕ ಹೇಳ್ತೀನಿ. ಮ್ಯಾಲೆ ಮಲಕೊಂಡಾರ.'

'ಅಮ್ಮಾ, ನಿನ್ನೇ ಅಲ್ಲಿ ಅವನ ಮಣ್ಣು ಮಾಡ್ಯಾರ.'

'ದೇವರು ಎಂಥಾ ಅನ್ಯಾಯ ಮಾಡಿದ! ಇದ್ದ ಒಬ್ಬ ಮಗನನ್ನ ಕಳಕೊಂಡು ಅನಾಥರಾದೆವು! ಈ ಕೊರಾನಾ ದಾಟಿದ ಮ್ಯಾಲೆ ಅವನ ಮದಿವಿ ಮಾಡೋರು ಇದ್ದಿವಿ. ಇಬ್ಬರೂ ಒಪ್ಪಿಕೊಂಡಿದ್ದರು. ನಿಶ್ಚಯ ಮಾಡಿದ್ದಿವಿ. ನಮ್ಮ ಪ್ರಾರಬ್ಧ ಹೀಗೈತಲ್ಲ! ಇನ್ನ ಜೀವನಪರ್ಯಂತ ನೆನಪಿಸಿಕೋತ ಕೊರಗತಾ ಇರೋದು ನಮ್ಮ ಹಣ್ಯಾಗ ಬರದೈತಿ.'

'ಅವ ನಮ್ಮೆಲ್ಲರ ಮನಸಿನಾಗ ಯಾವತ್ತೂ ಇರತಾನಮ್ಮ' ಅವರು ಮತ್ತೆ ತೀರ ಭಾವುಕರಾದರು.